BD-2766/2017/ARE-15

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್/ಉಪಲೋಕ್/2766/2017/ಎ.ಆರ್.ಇ-15

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್ ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ: 23/11/2021.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ- **ಶ್ರೀ.ಸಿರಾಜ್ ಉಲ್ ಹುಸೇನ್, ಪಿ.ಡಿ.ಓ., ಹಿರೆಕೆರೆಹಲ್ಲಿ ಗ್ರಾಮ ಪಂಚಾಯತಿ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ** ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು.

* * * *

ದೂರುದಾರರಾದ ಶ್ರೀ.ಜಿ.ಎಸ್.ಮೋಹನ್, ತಳವಾರಹಳ್ಳಿ ಗ್ರಾಮ, ಮೊಳಕಾಲ್ಮೂರು ತಾಲ್ಲೂಕು ನಿವಾಸಿ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದರುದಾರರಾದ **ಶ್ರೀ.ಸಿರಾಜ್ ಉಲ್ ಹುಸೇನ್, ಪಿ.ಡಿ.ಓ., ಹಿರೆಕೆರೆಹಲ್ಲಿ ಗ್ರಾಮ ಪಂಚಾಯತಿ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ)** ರವರ ವಿರುದ್ಧ ದಿ.20.09.2017 ರಂದು ದೂರನ್ನು ಸಲ್ಲಿಸಿರುತ್ತಾರೆ.

2) **ದೂರಿನ ಸಾರಾಂಶ :**

ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು, ಹಿರೇಕೇರೆಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎದುರುದಾರರಾದ ಶ್ರೀ.ಸಿರಾಜ್ ಉಲ್ ಹುಸೇನ್ ರವರು ಸದರಿ ಪಂಚಾಯಿತಿ ವ್ಯಾಪ್ತಿಯ ತಳವಾರಳ್ಳಿ ಗ್ರಾಮದಲ್ಲಿ ಸೈಯದ್ ಲೇಔಟ್‌ನ ಮಾಲೀಕರೊಂದಿಗೆ ಶಾಮೀಲಾಗಿ ಯಾವುದೇ ತೆರಿಗೆ ವಿಧಿಸದೆ ಇ-ಸ್ವತ್ತು ನಮೂನೆಗಳನ್ನು ವಿತರಿಸಿ ಗ್ರಾಮ ಪಂಚಾಯತ್ ಅನುದಾನಕ್ಕೆ ನಷ್ಟ ಉಂಟು

ಮಾಡಿರುತ್ತಾರೆ ಅಲ್ಲದೆ ಗ್ರಾಮ ಪಂಚಾಯತ್ ಅಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು ಕಾನೂನಿನ ನಿಯಮಗಳನ್ನು ಗಾಳಿಗೆ ತೂರಿ ಅಕ್ರಮ ಮಾಡಿರುವುದಾಗಿ ಈ ಪ್ರಾಧಿಕಾರಕ್ಕೆ ದೂರು ಸಲ್ಲಿಸಿರುತ್ತಾರೆ.

3) ಎದುರುದಾರರಿಂದ ಮಾಹಿತಿ ಪಡೆಯಲಾಗಿ ದಿ:18/8/2016ರಿಂದ 31/6/2017ರ ವರೆಗೆ ಹಿರೇಕೆರೆ ಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ನಿರ್ವಹಿಸಿದ್ದು, ಸೈಯದ್ ಗೌಸ್ ರವರ ಎನ್.ಎ ಆದ ಜಮೀನಿಗೆ ಸಂಬಂಧಪಟ್ಟಂತೆ 106 ಇ-ಸ್ವತ್ತು ಅರ್ಜಿಗಳನ್ನು ತೆರೆದಿದ್ದು, ಕಂಪ್ಯೂಟರ್‌ನಿಂದ ಇ-ಸ್ವತ್ತುಗಳು ತೆಗೆದ ನಂತರ ವಾರಸುದಾರರಿಗೆ ಕೊಡುವ ಸಮಯದಲ್ಲಿ ರಸೀದಿಯನ್ನು ಹಾಕಿ ಹಣ ಸ್ವೀಕೃತಿ ಮಾಡಬೇಕೆಂದು ತಪ್ಪಾಗಿ ಬಾವಿಸಿ ಇ-ಸ್ವತ್ತುಗಳನ್ನು ಮಾಡಿರುವುದಾಗಿ ದಿ:5/1/2019ರಂದು ಸಲ್ಲಿಸಿದ ಹೇಳಿಕೆಯಲ್ಲಿ ಎದುರುದಾರರು ಈ ಪ್ರಾಧಿಕಾರಕ್ಕೆ ತಿಳಿಸಿಕೊಟ್ಟಿದ್ದರು.

4) ಮುಂದುವರೆದು, ಜಮೀನಿನ ವಾರಸುದಾರರು ದಿ:10/4/2017ರಲ್ಲಿ ಕಛೇರಿಗೆ ಬಂದು ಲಿಖಿತವಾಗಿ ಅರ್ಜಿ ಸಲ್ಲಿಸಿ ಸ್ವತ್ತುಗಳ ವಿವರಗಳಲ್ಲಿ ಹಲವಾರು ನ್ಯೂನ್ಯತೆಗಳಿದ್ದು ಅಂದರೆ, ಹೆಸರುಗಳು, ಚೆಕ್ಕುಬಂದಿ, ಸೈಟ್ ನಂಬರ್ ಇತ್ಯಾದಿ ಇವುಗಳನ್ನು ಸರಿಪಡಿಸಿಕೊಡಲು ಕೋರಿದ ಕಾರಣ ಈಗಾಗಲೇ ತೆರೆದಿರುವ ಇ-ಸ್ವತ್ತುಗಳನ್ನು (ಇ-Khata) ರದ್ದು ಪಡಿಸುವಂತೆ ಕೋರಿ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿತ್ತು. ನಿಯಮಾನುಸಾರ ಪರಿಶೀಲನೆ ಮಾಡಿ ಕಾನೂನು ಪ್ರಕಾರ ವಸೂಲಿ ಯಾಗತಕ್ಕ ಎಲ್ಲಾ ಹಣವನ್ನು ಜಮೀನಿನ ಮಾಲೀಕರಿಂದ ಜಮಾ ಮಾಡಲಾಗುವುದು ಎಂದು ಸದರಿ ಉತ್ತರದಲ್ಲಿ ಎದರುದಾರರು ತಿಳಿಸಿರುತ್ತಾರೆ.

5) ದೂರುದಾರರು ದಿ:3/11/2020ರ ತಮ್ಮ ಪ್ರತ್ಯುತ್ತರದಲ್ಲಿ ಇ-ಸ್ವತ್ತುಗಳನ್ನು ರದ್ದುಪಡಿಸುವುದಾಗಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸುವುದಾಗಿ

ಎದುರುದಾರರು ನೆಪ ಮಾತ್ರಕ್ಕೆ ತಿಳಿಸಿದ್ದು, ಯಾವುದೇ ಇ-ಸ್ವತ್ತುಗಳು ಇಲ್ಲಿಯವರೆಗೆ ರದ್ದುಪಡಿಸಿರುವುದಿಲ್ಲ ಹಾಗು ಸೈಯದ್ ಲೇಔಟ್‌ನ ಮಾಲೀಕರು ಈಗಾಗಲೇ ಸೈಟುಗಳನ್ನು ಮಾರಾಟ ಮಾಡಿಕೊಂಡಿರುವುದರಿಂದ ಎದುರುದಾರರ ಹಾಗು ಕಾರ್ಯ ನಿರ್ವಾಹಕ ಅಧಿಕಾರಿಗಳು ಕಾನೂನಿನ ನಿಯಮಗಳನ್ನು ಗಾಳಿಗೆ ತೂರಿ ಅಕ್ರಮ ಮಾಡಿದ್ದು, ಎಲ್ಲಾ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲು ಕೋರಿರುತ್ತಾರೆ.

6) ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ ಮತ್ತು ದೂರಿನಲ್ಲಿ ಮಾಡಿರುವ ಆಪಾದನೆಗಳ ಕುರಿತು ಕೈಗೊಂಡ ಕ್ರಮದ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳು, ಮೊಳಕಾಲ್ಮೂರು ತಾಲ್ಲೂಕು ಪಂಚಾಯಿತಿ ಇವರಿಗೆ ವರದಿ ಸಲ್ಲಿಸುವಂತೆ ಗೌರವಾನ್ವಿತರ ಒಪ್ಪಿಗೆಯ ಮೇರೆಗೆ ನೋಟೀಸು ನೀಡಲಾಗಿದ್ದು, ದಿ:11/2/2021ರಂದು ಸದರಿಯವರು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹಿರೇಕೇರೆಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನೀಡಿರುವ ವರದಿ ಮತ್ತು ದಾಖಲೆಗಳೊಂದಿಗೆ ತಮ್ಮ ಪತ್ರವನ್ನು ಈ ಪ್ರಾಧಿಕಾರಕ್ಕೆ ಕಳುಹಿಸಿಕೊಟ್ಟಿರುತ್ತಾರೆ.

7) ಮೇಲೆ ಉಲ್ಲೇಖಿಸಿರುವ ಪತ್ರ ಹಾಗು ವರದಿ ಮತ್ತು ಅದರ ಜೊತೆ ಕಳುಹಿಸಿರುವ ರಸೀದಿಯನ್ನು ಗಮನಿಸಿದಾಗ ಶ್ರೀ.ಸೈಯದ್ ಗೌಸ್ ರವರ ಭೂ-ಪರಿವರ್ತಿತ ವಾಸೋಪಯೋಗಿ ನಿವೇಶನವುಳ್ಳ ಲೇಔಟ್‌ಗೆ ಸಂಬಂಧಪಟ್ಟ ಇ-ಸ್ವತ್ತು ವಿತರಿಸುವಾಗ ತೆರಿಗೆ ರಶೀಧಿಗಳು ವಿತರಿಸಿದ ಬಗ್ಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಆದರೆ, ದಿ:28/6/2018ರ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿ ಸದರಿ ಲೇಔಟ್‌ಗೆ ಸಂಬಂಧಿಸಿದಂತೆ ನಿರ್ವಾಹಣೆ ಶುಲ್ಕವನ್ನಾಗಿ ದಿ:29/6/2018ರಂದು ರೂ.145,550/-ಗಳನ್ನು ವಿಧಿಸಲಾಗಿರುತ್ತದೆ ಎಂಬ ಮಾಹಿತಿ ತಿಳಿಸಿ ರಶೀಧಿಯ ನಕಲನ್ನು ಒದಗಿಸಿರುತ್ತಾರೆ.

8) ಪ್ರಾಧಿಕಾರಕ್ಕೆ ಸಲ್ಲಿಸಿರುವ ಮಾಹಿತಿ ಮತ್ತು ರಶೀದಿಯು **ಕೇವಲ ಲೇಔಟ್‌ಗೆ ಸಂಬಂಧಿಸಿದಂತೆ ನಿರ್ವಹಣೆ ಶುಲ್ಕ ವಿಧಿಸಿರುವುದು ಕಂಡುಬಂದಿದ್ದು, ಇ-ಸ್ವತ್ತು ವಿತರಿಸುವಾಗ ಯಾವುದೇ ತೆರಿಗೆ ರಶೀದಿಗಳನ್ನು ವಿತರಿಸಿದ ಬಗ್ಗೆ ಮಾಹಿತಿ ಲಭ್ಯ ಇರವುದಿಲ್ಲ** ಎಂದು ಹಾಲಿ ಸೇವೆ ಸಲ್ಲಿಸಿರುವ ಹಿರೇಕೆರೆ ಹಳ್ಳಿ ಗ್ರಾ.ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗು ಮೊಳಕ್ಕೂರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ದಿ:11/2/2021ರ ಪತ್ರ ಮತ್ತು ವರದಿಯಲ್ಲಿ ತಿಳಿಸಿರುತ್ತಾರೆ. ಆದಾಗ್ಯೂ ದಿ:5/1/2019ರಂದು ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ಒಪ್ಪಿಕೊಂಡ ಹಾಗೆ ಸೈಯದ್ ರವರು ಮಾಡಿದ ಲೇಔಟ್‌ಗೆ ಸಂಬಂಧಪಟ್ಟಂತೆ 106 ಇ-ಸ್ವತ್ತುಗಳನ್ನು ಯಾವುದೇ ರಸೀದಿಗಳು ಇಲ್ಲದೆ ತೆರೆದಿದ್ದು, ಅವುಗಳನ್ನು ರದ್ದುಪಡಿಸಲು ಕಾರ್ಯ ನಿರ್ವಾಹಕ ಅಧಿಕಾರಿಗಳು ಮನವಿ ಸಲ್ಲಿಸಿದ ಬಗ್ಗೆ ದಾಖಲೆ ಒದಗಿಸದೆ ಇದ್ದು, ದೂರಿನಲ್ಲಿ ಹಾಗೂ ಪ್ರತ್ಯುತ್ತರದಲ್ಲಿ ಫಿರ್ಯಾದುದಾರರು ತಿಳಿಸಿರುವ ಹಾಗೆ ಎದುರುದಾರರು ಆ ರೀತಿ ನೆಪ ಮಾತ್ರಕ್ಕೆ ಆಕ್ಷೇಪಣೆಗಳಲ್ಲಿ ತಿಳಿಸಿದ್ದು, ಇಲ್ಲಿಯವರೆಗೂ ಯಾವುದೇ ಇ-ಸ್ವತ್ತು ರದ್ದುಪಡಿಸದೇ ಇರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದ್ದು, ಸಂಬಂಧಪಟ್ಟ ಸೈಯದ್ ಲೇಔಟ್ ಮಾಲೀಕರು ಸೈಟುಗಳನ್ನು ಮಾರಾಟ ಮಾಡಿಕೊಂಡಿದ್ದು ಪಂಚಾಯಿತಿಯ ಬೊಕ್ಕಸಕ್ಕೆ ನಷ್ಟ ಉಂಟಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

9) ಈ ಹಿನ್ನೆಲೆಯಲ್ಲಿ, ಎದುರುದಾರರು ತಮ್ಮ ಸೇವಾ ಅವಧಿಯಲ್ಲಿ ಸಂಪೂರ್ಣ ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ ಇಲ್ಲದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ 3(1) (i)ರಿಂದ (iii) ಅನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಕಂಡು ಬರುತ್ತದೆ. ಆದ್ದರಿಂದ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಿ, ವಿವರವಾದ ಇಲಾಖಾ ವಿಚಾರಣೆ ನಡೆಸಲು ಹಾಗೂ ವಿಚಾರಣೆ ನಡೆಸುವ ಸಲುವಾಗಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅನ್ವಯ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ

ವಹಿಸಿಕೊಡುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರ ಅಡಿಯಲ್ಲಿ ದತ್ತವಾದ ಅಧಿಕಾರದಿಂದ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

10) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿ ಅನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

25/11/21

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**